ಕಕ್ಕವನ್ನು ಹೆಕ್ಕಿತಂದು ಹೊರಗೆ ಬಿಸಾಕುತ್ತದೆ.

ಹಾವುರಾಣಿಯಂತಹ ದೊಡ್ಡಗಾತ್ರದ ಜೀವಿಗಳನ್ನು ತನ್ನ ಮರಿಯ ಬಾಯಿಗೆ ಇಡಿಯಾಗಿ ತುರುಕುವ ಮಿಂಚುಳ್ಳಿ ಸ್ವಭಾವವೇ ವಿಚಿತ್ರ ಎನಿಸುತ್ತದೆ. ಆ ಬಕಾಸುರ ಮರಿಗಳು ತಮ್ಮ ದೇಹಕ್ಕಿಂತ ದೊಡ್ಡ ಸೈಜಿನ ಆಹಾರ ಸಾಮಾಗ್ರಿಯನ್ನು ಹೇಗೆ ನುಂಗಿ ಅರಗಿಸಿಕೊಳ್ಳುತ್ತವೆಯೋ ಆ ದೇವರಿಗೇ ಗೊತ್ತು. ಮರಿಗಳ ಗಾತ್ರಕ್ಕಿಂತ ಎರಡು ಪಟ್ಟು ಹಿರಿದಾದ ಕಪ್ಪೆ ಮತ್ತು ಏಡಿಗಳನ್ನು ಸಾರಾಸಗಟಾಗಿ ಮಕ್ಕಳ ಗಂಟಲಿಗೆ ತುರುಕುವ ಮಿಂಚುಳ್ಳಿ ಮತ್ತೆ ಊಟ ಹಿಡಿದು ತರಲು ಹೋಗುತ್ತದೆ. ಅಷ್ಟರೊಳಗೆ ತಾಯಿ ಕೊಟ್ಟ ಭರ್ಜರಿ ತುತ್ತನ್ನು ಮರಿ ನುಂಗಬೇಕು. ಇಲ್ಲದಿದ್ದರೆ ಅರ್ಧ ತಾಸಿನ ನಂತರ ಬಂದು ಪರೀಕ್ಷಿಸುವ ಹಕ್ಕಿ ಮರಿ ತಿನ್ನಲಾಗದ ತುತ್ತನ್ನು ಕಸಿದುಕೊಂಡು ಹೊರಕ್ಕೆ ತಂದು ತಾನೇ ತಿಂದು ಮುಗಿಸುತ್ತದೆ.

ಯಾವುದೇ ಕಾರಣಕ್ಕೂ ಮರಿ ಬೇಗ ತಿಂದು ದಕ್ಕಿಸಿಕೊಳ್ಳದ ಆಹಾರವನ್ನು ಅದು ಮುಂದುವರೆದು ತಿನ್ನುವಂತೆ ಮಿಂಚುಳ್ಳಿ ಒತ್ತಾಯಿಸುವುದಿಲ್ಲ. ಬೆಳಗಿನಿಂದ ಶುರುವಾಗುವ ಈ ಔತಣ ಕೂಟ ಮಧ್ಯಾಹ್ನದ ಹೊತ್ತಿಗೆ ಚೂರು ಬಿಡುವಿಗೆ ನಿಲ್ಲುತ್ತದೆ. ಸತತ ಓಡಾಡಿ ಸುಸ್ತಾದ ಪಕ್ಷಿಯು ಕೂಡ ಸಮೀಪದ ಮರದ ಮೇಲೆ ಕೂತು ವಿಶ್ರಾಂತಿ ಪಡೆಯುತ್ತದೆ. ಆ ಸಂದರ್ಭದಲ್ಲಿ ಕೂಡ ಅದರ ಚಾಣಾಕ್ಷ ಕಣ್ಣಿನ ನಿಗಾ ಅದರ ಗೂಡಿನ ಮೇಲೆ ಇರುತ್ತದೆ. ಸಾಧಾರಣವಾಗಿ ರಾತ್ರಿ ಹೊತ್ತು ಮಿಂಚುಳ್ಳಿಗಳು ತಮ್ಮ ಮರಿಗಳ ಜೊತೆಯಲ್ಲಿ ಪೊಟರೆ ಗೂಡಿನಲ್ಲಿ ಮಲಗುವುದಿಲ್ಲ. ಹತ್ತಿರದ ಮರದ ಮೇಲೆ ಕೂತು ನಿದ್ರಿಸುತ್ತವೆ. ತಮಗೆ ದೊಡ್ಡ ಉಪದ್ರಕಾರಿಗಳಾದ ಹಾವುಗಳು ಸಲೀಸಾಗಿ ಬಂದು ಗೂಡಿಗೆ ಕಾಟ ಕೊಡಲಾಗದ ಸೂಕ್ತ ಜಾಗೆಯನ್ನೇ ಗುರುತಿಸಿಯೇ ಇವು ಗೂಡು ಕಟ್ಟುವ ಜಾಗ್ರತೆ ರೂಪಿಸಿಕೊಂಡಿವೆ.

ಹತ್ತು ಹನ್ನೆರಡು ದಿನದ ನಂತರ ಮರಿಗಳು ಕೊಂಚ ರೆಕ್ಕೆ ಜಾಡಿಸಿ ಬಲ ತೋರಿಸಿದ ತಕ್ಷಣ ತಾಯಿ ಊಟ ಕೊಡುವುದನ್ನು ನಿಲ್ಲಿಸುತ್ತದೆ. ಮಕ್ಕಳಿಗೀಗ ಹೊಸ ಶಿಕ್ಷಣದ ಸಮಯ. ಮರಿಗಳಿಗೆ ಬುದ್ಧಿ ಕಲಿಸುವ ಹೊತ್ತು. ಹಾರುವ ಪರಿ ತಿಳಿಸುವ ಇರಾದೆ. ಈಗ ಆಹಾರವನ್ನು ಹಿಡಿದು ತಂದ ಮಿಂಚುಳ್ಳಿ ಪೊಟರೆಯ ಹತ್ತಿರ ಕೂತು ಕೂಗುತ್ತದೆ. ಮಕ್ಕಳಿಗೆ ಹೊರಗೆ ಬಂದು ತಿನ್ನುವಂತೆ ಪ್ರೇರೇಪಿಸುತ್ತದೆ. ಗೂಡಲ್ಲೇ ಕೂತು ತಿಂದು ಅಭ್ಯಾಸವಾದ ಮಕ್ಕಳು ಅಷ್ಟು ಸುಲಭಕ್ಕೆ ಹೊರಗೆ ಬರುವುದೇ ಇಲ್ಲ. ಆಗ ತಾಯಿ ನಿಷ್ಕರುಣೆಯಿಂದ ಅವುಗಳನ್ನು ಉಪವಾಸದಲ್ಲಿ ಕೆಡಹುತ್ತದೆ. ‘ಊಟ ಬೇಕು ಎಂದರೆ ಮುಚ್ಕೊಂಡು ಹೊರಕ್ಕೆ ಹಾರಿ ಬನ್ನಿ’ ಎಂದು ತಾಕೀತು ಮಾಡುತ್ತದೆ.

ತನ್ನ ಒಡಲ ಮರಿಗಳು ಬೇಗ ವಿದ್ಯೆ ಬುದ್ಧಿ ಕಲಿತು ಸ್ವತಂತ್ರವಾಗಲಿ ಎಂಬ ತವಕ ಅದರದು. ಇದ ಅರಿಯದ ಮಕ್ಕಳು ‘ನಿನ್ನೆ ತನಕ ಚೆನ್ನಾಗಿ ತಿನ್ನಿಸುತ್ತಿದ್ದ ನಮ್ಮವ್ವನಿಗೆ ಇವತ್ತು ಯಾವ ರೋಗ ಬಡಿದಿದೆ?’ ಎಂದು ಗೊಣಗಿಕೊಳ್ಳುತ್ತವೆ. ಕೊನೆಗೆ ಹಸಿವಿನಿಂದ ಕಂಗೆಟ್ಟು ತಡೆಯಲಾಗದೆ ಹೊರಗೆ ಊಟ ಹಿಡಿದು ಕೂತ ಅಮ್ಮನೆಡೆಗೆ ಯಮಸಾಹಸ ಪಟ್ಟು ಹಾರಿ ಬರುತ್ತವೆ. ಆಗ ತಾಯ ಸಂಭ್ರಮ ಹೇಳತೀರದು. ಆಮೇಲೆ ತಾಯಿ ಮತ್ತು ಮರಿಗಳು ಮತ್ತೆಂದೂ ಆ ಗೂಡನ್ನು ಸೇರುವುದಿಲ್ಲ. ಹೆರಿಗೆ ಮುಗಿದ ಮೇಲೆ ಆಸ್ಪತ್ರೆ ಬಿಲ್ ಕಟ್ಟಿ ಡಿಸ್ಚಾರ್ಜ್ ಆಗುವಂತೆ ಮಿಂಚುಳ್ಳಿ ತನ್ನ ಮರಿಗಳನ್ನು ಕರೆದುಕೊಂಡು ಮರದ ರೆಂಬೆಕೊಂಬೆಗಳ ಮೇಲೆ ಹೋಗಿ ಕೂರುತ್ತದೆ.

ಆನಂತರ ಕೆಲ ದಿನಗಳ ಕಾಲ ಮರಿಗಳಿಗೆ ಊಟದ ಬೇಟೆಯ ಪಾಠ ಪ್ರವಚನಗಳು ನಡೆಯುತ್ತವೆ. ಮರಿಗಳು ತಕ್ಕಮಟ್ಟಿಗೆ ಸ್ವತಂತ್ರವಾಗಿ ತಮ್ಮ ಆಹಾರ ಹುಡುಕಿ ತಿನ್ನುವ ಕಲೆ ಸಾಮರ್ಥ್ಯ ರೂಢಿಸಿಕೊಂಡದ್ದನ್ನು ಮನಗಂಡ ತಕ್ಷಣವೇ ತಾಯಿ ತನ್ನ ಮಕ್ಕಳ ಜೊತೆಗಿನ ಬಾಂಧವ್ಯವನ್ನು ಕಳೆದುಕೊಳ್ಳುತ್ತಾಳೆ. ಮತ್ತೆ ಬೇರೆ ಕಡೆ ವಲಸೆ ಹೊರಡುತ್ತಾಳೆ. ಮತ್ತೊಂದು ಮಳೆಗಾಲಕ್ಕೆ ಮತ್ತೆ ಗೂಡು ಕಟ್ಟುವ, ಮೊಟ್ಟೆ ಇಟ್ಟು ಮರಿ ಮಾಡಿ ಸಾಕುವ ಕಾಯಕ ಶುರುವಾಗುತ್ತದೆ. ಮರಿಗಳಿಗೆ ಅತ್ಯಂತ ಕಡಿಮೆ ಅವಧಿಯಲ್ಲಿ ವಿದ್ಯೆ ಬುದ್ಧಿ ಕಲಿಸಿ ಟಾಟಾ ಬಾಯ್ ಬಾಯ್ ಹೇಳುವ ಈ ಹಕ್ಕಿ ನಾಲ್ಕು ವರ್ಷಗಳ ಕಾಲ ಬದುಕಬಲ್ಲದು. ಈ ಪರಿಯ ಬಣ್ಣದ ಖಗದ ಬದುಕಿನ ವೈವಿಧ್ಯತೆ ಎಷ್ಟು ರೋಚಕವೊ? ಅದರ ಹಾರಾಟ, ಕೂಗು, ಮತ್ತು ರೆಕ್ಕೆಗಳ ಸೌಂದರ್ಯ ಕೂಡ ಅಷ್ಟೇ ಚಕಿತ. ಆದರೆ, ಮತ್ತೊಮ್ಮೆ ಕಳೆದ ವರ್ಷದ ಗೂಡಿಗೇ ಬರಬಹುದು. ಇಲ್ಲದಿದ್ದರೆ ಮತ್ತೊಂದು ಹೊಸ ಮನೆ. ಮಗದೊಮ್ಮೆ ಹೊಸ ಬದುಕು. ●